## ಡಾ.ಅ.ನ. ಕೃಷ್ಣರಾವ್

೧೯೬೮ರಿಂದ ೭೦ರವರೆಗೆ ಅಧ್ಯಕ್ಷ ಸ್ಥಾನದಲ್ಲಿದ್ದವರು ಕೆ.ವಿ. ಶಂಕರೇಗೌಡರು. ಇವರ ನಂತರ ಸರ್ಕಾರ ಶಿಕ್ಷಣ ಸಚಿವರನ್ನು ಅಕಾಡೆಮಿಯ ಅಧ್ಯಕ್ಷರನ್ನಾಗಿ ಮಾಡುವ ನಿಲುವಿನಲ್ಲಿ ಸ್ವಲ್ಪ ಬದಲಾವಣೆ ಮಾಡಿ, ಖ್ಯಾತ ಸಾಹಿತಿ ಅ.ನ.ಕೃಷ್ಣರಾಯರನ್ನು ೧೯೭೧ರಲ್ಲಿ ಅಧ್ಯಕ್ಷರನ್ನಾಗಿ ನೇಮಿಸಿತು. ೧೧೨ ಕಾದಂಬರಿಗಳು, ೯ ಕಥಾ ಸಂಗ್ರಹಗಳು ೨೪ ನಾಟಕಗಳೂ ಸೇರಿದಂತೆ ಸುಮಾರು ೧೯೦ ಕೃತಿಗಳನ್ನು ರಚಿಸಿದ್ದ ಅನಕೃ ತಮ್ಮ ಕಥನ ಕೌಶಲ್ಯ, ನಿರರ್ಗಳ ಶೈಲಿ, ಸಂಭಾಷಣೆಯ ಚಾತುರ್ಯ ಇವುಗಳಿಂದ ಓದುಗರನ್ನು ಸೆರೆ ಹಿಡಿದವರಾಗಿದ್ದರು. ಸಾಹಿತ್ಯವಲಯದಲ್ಲಿ ಅ.ನ.ಕೃ ಅವರಿಗೆ ಅಪಾರ ಗೌರವವಿತ್ತು. ಮಣಿಪಾಲದಲ್ಲಿ ೧೯೬೦ರಲ್ಲಿ ನಡೆದ ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾಲಯ ೧೯೭೦ರಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತ್ತು. ಇಂತಹ ಸಾಧಕ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದಾಗ ಸಾಹಿತ್ಯ ವಲಯ ಸಂತೋಷಪಟ್ಟಿತು.

ಅ.ನ.ಕೃ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರವರ್ತಕರಾಗಿದ್ದವರು. ಹೊಸ ಲೇಖಕರ ಪಡೆಯನ್ನೇ ನಿರ್ಮಿಸಿದ್ದವರು. ಹೀಗಾಗಿ ಅಕಾಡೆಮಿ ಅಧ್ಯಕ್ಷಸ್ಥಾನದಿಂದ ಅವರು ಸಾಹಿತ್ಯ ಕ್ಷೇತ್ರಕ್ಕೆ ಮತ್ತಷ್ಟು ಮಹತ್ವಪೂರ್ಣ ಕೊಡುಗೆ ನೀಡಬಹುದೆಂಬ ನಿರೀಕ್ಷೆ ಇತ್ತು. ಅವರಿಗೂ ಅಂತಹ ಉತ್ಸಾಹವಿತ್ತು. ಆದರೆ ಆರೋಗ್ಯ ಇವರ ಜೊತೆಗೂಡಲಿಲ್ಲ. ೮ ಜುಲೈ ೧೯೭೧ರಂದು ಅ.ನ.ಕೃ ನಿಧನರಾದಾಗ ಅಕಾಡೆಮಿ ಹಾಗೂ ಕನ್ನಡ ಜನತೆ ಅಕ್ಷರಶಃ ಅಪಾರ ನಷ್ಟ ಅನುಭವಿಸಿತು.